# ಸಮಗ್ರ ಸ್ವರೂಪದಲ್ಲಿ ಸಾರ್ವಜನಿಕ ಆರೋಗ್ಯ ಮರಳಿ ಪಡೆಯುವಿಕೆ: ಕ್ರಿಯಾ ಯೋಜನೆಗೆ ಕರೆ

**(ಸಾರ್ವಜನಿಕರ ಮಾಹಿತಿಗಾಗಿ ಆನ್‌ಲೈನ್‌ನಲ್ಲಿ ಪ್ರಕಟಣೆಗೆ 2020ರ ನವೆಂಬರ್ 30ರ ಸೋಮವಾರ ಮಧ್ಯರಾತ್ರಿ 11.59ರವರೆಗೆ ನಿರ್ಬಂಧ)**

ಈ ಕೆಳಗೆ ಸಹಿ ಮಾಡಿರುವ ನಾವು, **'ಸಮಗ್ರ ಸ್ವರೂಪದಲ್ಲಿ ಸಾರ್ವಜನಿಕ ಆರೋಗ್ಯ ಮರಳಿ ಪಡೆಯುವಿಕೆ'**ಗೆ ಸಂಬಂಧಿಸಿದಂತೆ, ಕೋವಿಡ್ ಪಿಡುಗಿನ ವಿರುದ್ಧ ಪರಸ್ಪರ ಸಹಕಾರದ, ಸಾರ್ವಜನಿಕರ ವಿಶ್ವಾಸದ ಮತ್ತು ಪರಿಣಾಮಕಾರಿಯಾಗಿ ಸ್ಪಂದಿಸುವ ಅವಕಾಶಗಳನ್ನು ಕಳೆದುಕೊಂಡಿರುವುದರ ಬಗ್ಗೆ ಮತ್ತು ಕೋವಿಡ್–19 ಪಿಡುಗು, ಅದರ ಪರಿಣಾಮದಿಂದ ಉದ್ಭವಿಸಿರುವ ಸಂಕಷ್ಟಗಳು, ಹಕ್ಕುಗಳು ಉಲ್ಲಂಘನೆಯಾಗಿರುವುದನ್ನು ವಿಶ್ವದಾದ್ಯಂತ ಜನರು ಸಹಿಸಿಕೊಂಡಿರುವ ಬಗ್ಗೆ ಇತರರು ವ್ಯಕ್ತಪಡಿಸಿರುವ ಕಳವಳವನ್ನು ನಾವು ಕೂಡ ಪುನರುಚ್ಚರಿಸುತ್ತಿದ್ದೇವೆ.

ಕೋವಿಡ್–19 ಪಿಡುಗಿಗೆ ಕಡಿವಾಣ ಹಾಕುವ ಸಂಬಂಧ, ಸಮಗ್ರ ಸ್ವರೂಪದ, ಸಮಾನತೆಗೆ ಆದ್ಯತೆ ನೀಡುವ ಮತ್ತು ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯ ವಿಧಾನವನ್ನು ಅಳವಡಿಸಿಕೊಳ್ಳಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಿಶೇಷ ಅಧಿವೇಶನದಲ್ಲಿ ಎಲ್ಲ ದೇಶಗಳ ಮುಖ್ಯಸ್ಥರು ಮತ್ತು ಸರ್ಕಾರಗಳಿಗೆ ಹಾಗೂ ಪಿಡುಗು ನಿಯಂತ್ರಣ ಕುರಿತ ಕಾರ್ಯ ಯೋಜನೆ ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗಿರುವವರಿಗೆ ನಾವು ಮನವಿ ಮಾಡಿಕೊಳ್ಳುತ್ತೇವೆ. ಕೋವಿಡ್–19 ಪಿಡುಗಿಗೆ ಸೂಕ್ತವಾಗಿ ಸ್ಪಂದಿಸುವ ಮತ್ತು ಭವಿಷ್ಯದಲ್ಲಿನ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ನಿರ್ವಹಣೆಗೆ ತಿಳಿವಳಿಕೆಯ ವಿವಿಧ ಮೂಲಗಳನ್ನು ಸಮಾನವಾಗಿ ಬಳಸಿಕೊಳ್ಳಲು, ಈ ವಿಷಯದಲ್ಲಿ ಶಿಸ್ತು ಪಾಲಿಸಲು ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಲು ಈ ಕೆಳಕಂಡ ತತ್ವಗಳನ್ನು ಪಾಲಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

1. **ಸಮಗ್ರ ಸ್ವರೂಪದ ಸಾರ್ವಜನಿಕ ಆರೋಗ್ಯ ಸುಧಾರಣಾ ಕ್ರಮಗಳ ಅಭಿವೃದ್ಧಿ ಮತ್ತು ಜಾರಿ:** ವ್ಯಾಪಕ ಪ್ರಮಾಣದಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆ ಮತ್ತು ಸುಧಾರಣೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳು, ನೀತಿ ನಿಯಮಗಳು ಮತ್ತು ಅವುಗಳ ಪ್ರಯೋಜನ ಪಡೆಯಲು ದೇಶದ ಒಳಗೆ ಮತ್ತು ಎಲ್ಲ ದೇಶಗಳ ಮಧ್ಯೆ ಎಲ್ಲ ಹಂತಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಮತ್ತು ಸಮಾನತೆ ಆಧರಿಸಿದ ನೀತಿ ನಿರೂಪಣೆ ಮತ್ತು ಸಂವಹನ ಸೂತ್ರ ರೂಪಿಸಲು ಒಗ್ಗಟ್ಟು ಪ್ರದರ್ಶಿಸಬೇಕು. ಸಾರ್ವಜನಿಕರ ಆರೋಗ್ಯ ಸುಧಾರಣೆ ಉದ್ದೇಶದ ಕ್ರಮಗಳು ಮತ್ತು ನೀತಿಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವಾಗ ಸಹಕಾರ, ಪಾಲುದಾರಿಕೆ, ಜವಾಬ್ದಾರಿ ಹಂಚಿಕೆ ಇರಬೇಕು.

2. **ಪಿಡುಗು ನಿಯಂತ್ರಣಕ್ಕೆ ಕೊಡುಗೆ ನೀಡಿದವರ ಸಾಧನೆಗೆ ಮನ್ನಣೆ:** ಪಿಡುಗಿನ ನಿಯಂತ್ರಣಕ್ಕೆ ಸ್ಪಂದಿಸುವ ಮತ್ತು ಅದರ ತೀವ್ರತೆಗೆ ಕಡಿವಾಣ ವಿಧಿಸುವ ಕ್ರಮಗಳನ್ನು ಜಂಟಿಯಾಗಿ ರೂಪಿಸಿದ, ಜತೆಯಾಗಿ ಜಾರಿಗೊಳಿಸಲು ನೆರವಾದ ಸೂಕ್ಷ್ಮ ಕೊಡುಗೆಗಳು ಮತ್ತು ಸಂಸ್ಥೆಗಳ ಸಾಧನೆಯನ್ನು ಗುರುತಿಸಬೇಕು. ಕೋವಿಡ್–19 ಪಿಡುಗಿನ ತೀವ್ರತೆಗೆ ಕಡಿವಾಣ ವಿಧಿಸುವ ಕಾರ್ಯದಲ್ಲಿ

ಅರ್ಥಪೂರ್ಣ ಬಗೆಯಲ್ಲಿ ಮತ್ತು ಸಕ್ರಿಯವಾಗಿ ಭಾಗಿಯಾದ ಆರೋಗ್ಯ ಕೇಂದ್ರಗಳು, ಮುಂಚೂಣಿ ಕಾರ್ಯಕರ್ತರು ಮತ್ತು ಅವರ ಸಂಘಟನೆಗಳು, ಸಮುದಾಯ ಮುಖಂಡರು, ನಾಗರಿಕ ಸಮಾಜ, ವಿವಿಧ ಸಮುದಾಯಗಳು ನಿರ್ವಹಿಸಿದ ಪ್ರಮುಖ ಪಾತ್ರವನ್ನು ಅದರಲ್ಲೂ ವಿಶೇಷವಾಗಿ ಇಂತಹ ಕೆಲಸದಲ್ಲಿ ಹೆಚ್ಚು ಅಪಾಯಕ್ಕೆ ಗುರಿಯಾಗುವವರನ್ನು ವಿಶೇಷವಾಗಿ ಗುರುತಿಸಬೇಕು.

3. **ಸಕಾಲಿಕ, ಖಚಿತ ಮಾಹಿತಿಯ ಸಾರ್ವಜನಿಕ ಲಭ್ಯತೆ:** ಪುರಾವೆಗಳ ವಿವಿಧ ಮೂಲಗಳಿಂದ ಪಡೆದ ಖಚಿತ ಮತ್ತು ವಿಂಗಡಿಸಿದ ಮಾಹಿತಿಯು ಸ್ಥಳೀಯ ಭಾಷೆಯಲ್ಲಿ ಸಕಾಲದಲ್ಲಿ ಸಾರ್ವಜನಿಕರಿಗೆ ದೊರೆಯುವುದನ್ನು ಖಚಿತಪಡಿಸಿಕೊಳ್ಳಬೇಕು. ಸಾಂಕ್ರಾಮಿಕ ಪಿಡುಗಿನ ಮಾದರಿ, ಅದರಿಂದ ಉಂಟಾಗಬಹುದಾದ ಅಸ್ವಸ್ಥತೆ, ಸಾವಿನ ಪ್ರಕರಣಗಳಿಗೆ ಸಂಬಂಧಿಸಿದ ದತ್ತಾಂಶಗಳ ವಿಶ್ಲೇಷಣೆ, ಹಂಚಿಕೆ, ಅವುಗಳ ಮಿತಿ ಜತೆಗೆ ಹಸ್ತಕ್ಷೇಪ ಕ್ರಮಗಳ ಪರಿಣಾಮಗಳು, ಸಂಪನ್ಮೂಲಗಳ ಬಳಕೆ, ಹಸ್ತಕ್ಷೇಪದ ಕ್ರಮಗಳ ಪರಿಣಾಮಗಳ ಕುರಿತು ಪಾರದರ್ಶಕ ವರದಿ ಹಾಗೂ ವಿಶ್ವಾಸಾರ್ಹ ಮಾಹಿತಿ ಇರಬೇಕು. ತಿಳಿವಳಿಕೆ ಹಂಚಿಕೆ, ಮಾಹಿತಿ ಬಳಕೆ ಮತ್ತು ವಿವಿಧ ಶ್ರೇಣಿಯ ಸಮೂಹ ಮತ್ತು ಸಮುದಾಯಗಳಿಂದ ಪುರಾವೆ ಸಂಗ್ರಹಿಸಿ ಕೈಗೊಳ್ಳಬೇಕಾದ ಕ್ರಮಗಳ ಸ್ವರೂಪ ನಿರ್ಧರಿಸಿ, ಸಂವಹನ ನಡೆಸಿ ಅವುಗಳ ಮೌಲ್ಯಮಾಪನ ಮಾಡಬೇಕು. ಈ ಮೂಲಕ ಕೈಗೊಂಡ ಕ್ರಮಗಳ ಪರಿಣಾಮದ ಕುರಿತು ಸ್ವತಂತ್ರ ಮತ್ತು ಪಾರದರ್ಶಕ ಬಗೆಯಲ್ಲಿ ಪರಾಮರ್ಶೆ ನಡೆಸಬೇಕು. ಇದರಿಂದ ಅವುಗಳ ಸ್ವೀಕಾರಾರ್ಹತೆ ಹೆಚ್ಚಿಸುವುದು ಜತೆಗೆ ಶಾಸನಸಭೆ ಮತ್ತು ನಾಗರಿಕ ಸಮಾಜದಿಂದ ಮೇಲ್ವಿಚಾರಣೆ ನಡೆಸುವುದು.

4. **ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಪ್ರಸ್ತುತವಾಗಿರುವ ಸ್ಪಷ್ಟ ಗುರಿ ನಿಗದಿಪಡಿಸಬೇಕು.** ಸಾರ್ವತ್ರಿಕ ನೆಲೆಯಲ್ಲಿ ಮತ್ತು ಜನಸಂಖ್ಯೆಯಲ್ಲಿ ಎಲ್ಲರಿಗೂ ಸಮಾನ ರೀತಿಯಲ್ಲಿ ಆರೋಗ್ಯ ಮತ್ತು ಯೋಗಕ್ಷೇಮ ಉತ್ತೇಜಿಸುವ ಗುರಿ ಹೊಂದಿರಬೇಕು. ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ದುಡಿಯುವವರ ಆರೋಗ್ಯ ರಕ್ಷಣೆಯ ಅಗತ್ಯಗಳನ್ನು ಪೂರೈಸಲು ಅವಶ್ಯಕ ಆರೋಗ್ಯ ಸೇವೆಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವುದನ್ನು ಖಾತರಿಪಡಿಸಿಕೊಳ್ಳಬೇಕು. ಸಮುದಾಯ, ಕಾರ್ಯಕ್ರಮಗಳನ್ನು ಜಾರಿಗೆ ತರುವವರು, ಸಂಘಟಕರು ಮತ್ತು ಪ್ರಾಧಿಕಾರಗಳ ಮಧ್ಯೆ ಪರಸ್ಪರ ವಿಶ್ವಾಸ ಬೆಳೆಸಿ ಸುಸ್ಥಿರ ಬಗೆಯಲ್ಲಿ ಮುಂದುವರೆಸಿಕೊಂಡು ಹೋಗಲು ನೆರವಾಗುವಂತಿರಬೇಕು. ಲಿಂಗ ಮತ್ತು ಸಾಮಾಜಿಕ ಸಮಾನತೆ, ಪಾಲ್ಗೊಳ್ಳುವಿಕೆಯ ಸ್ಥಳೀಯ ಪರಿಸ್ಥಿತಿ, ಸಂದರ್ಭ, ಸಂಸ್ಕೃತಿ, ಪುರಾವೆ, ನಂಬಿಕೆ, ತಿಳಿವಳಿಕೆಗೆ ಅನುಗುಣವಾದ ಸಾರ್ವಜನಿಕ ಆರೋಗ್ಯ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು.

5. **ದಬ್ಬಾಳಿಕೆ ಸ್ವರೂಪದ, ಸೇನಾ ಮಧ್ಯಪ್ರವೇಶದ, ತಾರತಮ್ಯದಿಂದ ಕೂಡಿದ ಕ್ರಮಗಳನ್ನು ತಪ್ಪಿಸಬೇಕು.** ಸಾರ್ವಜನಿಕ ಆರೋಗ್ಯದ ಪ್ರತಿಸ್ಪಂದನ ವಿಷಯದಲ್ಲಿ ಇಂತಹ ಕ್ರಮಗಳು ಘನತೆಗೆ ಕುಂದು ತರಬಾರದು. ಅಪರಾಧ ಕಾಯ್ದೆ ಒಳಗೊಂಡಂತೆ, ರಾಷ್ಟ್ರೀಯ ಕಾಯ್ದೆ ಮತ್ತು ಪದ್ಧತಿಗಳು, ಅಂತರರಾಷ್ಟ್ರೀಯ ಮತ್ತು ಸ್ಥಳೀಯ ಮಾನವ ಹಕ್ಕುಗಳ ಒಪ್ಪಂದಗಳು ಹಾಗೂ ಅಂತರರಾಷ್ಟ್ರೀಯ ಆರೋಗ್ಯ ನಿಯಂತ್ರಣ ಕ್ರಮಗಳನ್ನು ಪರಿಗಣಿಸಬೇಕು ಹಾಗೂ ಅವುಗಳನ್ನು ಪಾಲನೆ

ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು. ಪಿಡುಗು ತಡೆಗಟ್ಟಲು, ನಿಯಂತ್ರಿಸಲು ಮತ್ತು ಕಡಿವಾಣ ವಿಧಿಸುವ ಕ್ರಮಗಳನ್ನು ಜಾರಿಗೆ ತರುವಾಗ ಯಾರಿಗೂ ತೊಂದರೆಯಾಗದಂತೆ ಎಚ್ಚರವಹಿಸಬೇಕು. ಇದರ ಜತೆಗೆ ಯಾರೊಬ್ಬರಲ್ಲೂ ಭಯ, ಆತಂಕ ಮೂಡಿಸಬಾರದು. ಯಾರ ವಿರುದ್ಧವೂ ತಾರತಮ್ಯ ಎಸಗಬಾರದು. ಕಳಂಕಿತರನ್ನಾಗಿಸಬಾರದು. ಯಾರೊಬ್ಬರಿಗೂ ಕಿರುಕುಳ ನೀಡಬಾರದು. ಹೊರದಬ್ಬುವ, ನಿರಂಕುಶ ಬಂಧನ, ಕಾನೂನುಬಾಹಿರವಾಗಿ ವಶಕ್ಕೆ ಪಡೆಯುವುದು ಅಥವಾ ಇತರ ಯಾವುದೇ ದಬ್ಬಾಳಿಕೆ ರೂಪದಲ್ಲಿ ಜನರ ಸ್ವಾತಂತ್ರ್ಯ ಮೊಟಕುಗೊಳಿಸಬಾರದು.

6. **ವೈಯಕ್ತಿಕ ಸ್ವಾತಂತ್ರ್ಯಕ್ಕೆ ಯಾವುದೇ ನಿರ್ಬಂಧ ಇರಬಾರದು.** ಸಾರ್ವಜನಿಕ ಅರೋಗ್ಯ ಮತ್ತು ಸುರಕ್ಷತೆಯು ಗಂಡಾಂತರಕ್ಕೆ ಒಳಪಡುವುದನ್ನು ನಿಯಂತ್ರಿಸಲು ವೈಯಕ್ತಿಕ ಸ್ವಾತಂತ್ರ್ಯವನ್ನು ಯಾವುದೇ ಬಗೆಯಲ್ಲಿ ನಿರ್ಬಂಧಿಸುವ ಮುಂಚೆ ವಿಶ್ವಸಂಸ್ಥೆಯ 'ಸಿರಾಕುಸಾ ತತ್ವ'ಗಳ ಪಾಲನೆ ಆಗುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ನಿರ್ಬಂಧಗಳು ಸ್ಪಷ್ಟ, ನ್ಯಾಯಸಮ್ಮತ, ಪ್ರಮಾಣಬದ್ಧ ಮತ್ತು ಸಾರ್ವಜನಿಕ ಆರೋಗ್ಯ ರಕ್ಷಣೆ ಉದ್ದೇಶದ ವೈಜ್ಞಾನಿಕ ಆಧಾರ ಒಳಗೊಂಡಿರಬೇಕು. ನಿರ್ಬಂಧಗಳನ್ನು ಸಮುದಾಯದ ಪಾಲ್ಗೊಳ್ಳುವಿಕೆಯ ನೆರವಿನಿಂದ ರೂಪಿಸಬೇಕು. ಕನಿಷ್ಠ ನಿರ್ಬಂಧಗಳೊಂದಿಗೆ ಹಾಗೂ ಪರಿಣಾಮಕಾರಿಯಾದ ಪರ್ಯಾಯ ಹಾಗೂ ಮುಂಜಾಗ್ರತಾ ತತ್ವಗಳನ್ನು ಆಧರಿಸಿ ನಿರ್ಬಂಧಗಳನ್ನು ಜಾರಿಗೆ ತರಬೇಕು. ಇಂತಹ ಕ್ರಮಗಳು ಸೀಮಿತ ಅವಧಿ ಹೊಂದಿರಬೇಕು. ಮಾನವನ ಘನತೆ ಗೌರವಿಸುವ ಬಗೆಯಲ್ಲಿ ಅನ್ವಯಗೊಳಿಸಬೇಕು ಹಾಗೂ ಪರಾಮರ್ಶೆಗೆ ಒಳಪಟ್ಟಿರಬೇಕು.

7. **ಆರೋಗ್ಯ ಸಿಬ್ಬಂದಿ, ಮುಂಚೂಣಿ ಕಾರ್ಯಕರ್ತರು ಮತ್ತವರ ಕುಟುಂಬಗಳಿಗೆ ರಕ್ಷಣೆ ಮತ್ತು ಬೆಂಬಲ.** ಆರೋಗ್ಯ ಕಾರ್ಯಕರ್ತರು, ಗುತ್ತಿಗೆ ನೌಕರರು, ಸಮುದಾಯ ಕೆಲಸಗಾರರು, ಸ್ವಯಂ ಸೇವಕರು ಇತರ ಮುಂಚೂಣಿ ಕಾರ್ಯಕರ್ತರು ಮತ್ತು ಬಿಡಿಬಿಡಿಯಾಗಿ ಸೇವೆಗೆ ಸೇರ್ಪಡೆಯಾದವರು ಹಾಗೂ ಅವರ ಕುಟುಂಬಗಳಿಗೆ ರಕ್ಷಣೆ ಒದಗಿಸಿ ಅಗತ್ಯ ಬೆಂಬಲ ನೀಡಬೇಕು. ಇವರಿಗೆಲ್ಲ ಸುರಕ್ಷಿತ ಮತ್ತು ಹಿತಕರ ಕೆಲಸದ ವಾತಾವರಣ ಕಲ್ಪಿಸಿಕೊಡಬೇಕು. ವೈಯಕ್ತಿಕ ರಕ್ಷಣೆಯ ಸಾಧನಗಳನ್ನು ಒದಗಿಸಬೇಕು ಹಾಗೂ ಸೋಂಕು ನಿಯಂತ್ರಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಖಚಿತ ಮತ್ತು ಸಕಾಲಿಕ ಮಾಹಿತಿ ಲಭ್ಯತೆ, ಮಾರ್ಗದರ್ಶನ ಮತ್ತು ತರಬೇತಿ, ಉಚಿತ ಪರೀಕ್ಷಾ ಸೌಲಭ್ಯ, ಚಿಕಿತ್ಸೆ, ಆರೈಕೆ, ಸಾಮಾಜಿಕ ಸುರಕ್ಷತೆ ಒಳಗೊಂಡ ಮಾನಸಿಕ ಬೆಂಬಲ ಹಾಗೂ ಕೆಲಸದ ಸ್ಥಳದಲ್ಲಿನ ಗಾಯಗಳಿಗೆ ಖಾತರಿದಾಯಕ ಪರಿಹಾರ ನೀಡಬೇಕು.

8. **ಆರೋಗ್ಯ ರಕ್ಷಣೆಗೆ ಸುರಕ್ಷಿತ ಉತ್ಪನ್ನಗಳ ಲಭ್ಯತೆ.** ಎಲ್ಲರಿಗೂ ಅದರಲ್ಲೂ ವಿಶೇಷವಾಗಿ ಹೆಚ್ಚು ಸಂಕಷ್ಟಕ್ಕೆ ಒಳಗಾದವರಿಗೆ ಆರೋಗ್ಯ ರಕ್ಷಣೆಯ ಅಗತ್ಯ ಸಾಧನಗಳನ್ನು (ವೈಯಕ್ತಿಕ ರಕ್ಷಣಾ ಉಪಕರಣ – ಪಿಪಿಇ, ರೋಗ ನಿರ್ಣಯ, ಚಿಕಿತ್ಸೆ, ಲಸಿಕೆ ಮತ್ತು ಸಂಬಂಧಿಸಿದ ತಂತ್ರಜ್ಞಾನ) ಸಾರ್ವತ್ರಿಕ ನೆಲೆಯಲ್ಲಿ ಸಾರ್ವಜನಿಕರಿಗೆ ಸೇರಿದ ಸರಕುಗಳೆಂದು ಪರಿಗಣಿಸಿ ಸಮಾನ ನೆಲೆಯಲ್ಲಿ ಮತ್ತು ಸುರಕ್ಷಿತವಾಗಿ ಒದಗಿಸಿ ಪಿಡುಗು ತಡೆಗಟ್ಟಲು ಮತ್ತು ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಆರೋಗ್ಯ ರಕ್ಷಣೆಯ ಸಾಧನಗಳನ್ನು ಸ್ಥಳೀಯವಾಗಿ ತಯಾರಿಸುವುದಕ್ಕೆ ಉತ್ತೇಜನ

ನೀಡಲು, ಅಗತ್ಯವಾದ ಬಂಡವಾಳ ತೊಡಗಿಸಲು ಮತ್ತು ತಯಾರಿಕಾ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಆರೋಗ್ಯ ರಕ್ಷಣೆ ಉತ್ತೇಜಿಸಲು, ಪಿಡುಗು ನಿಯಂತ್ರಿಸಲು, ಆರೈಕೆ ಮಾಡಲು, ಜೀವನೋಪಾಯಕ್ಕೆ ಬೆಂಬಲ ನೀಡಲು, ಆಹಾರ ಭದ್ರತೆ ಹಾಗೂ ಸಾಮಾಜಿಕ ಸುರಕ್ಷತೆ ಒದಗಿಸಲು ನಾಗರಿಕರ ನೇತೃತ್ವದಲ್ಲಿನ ತಂತ್ರಜ್ಞಾನ ಅಭಿವೃದ್ಧಿಪಡಿಸಬೇಕು. ಹೊಸ ಸಂಶೋಧನೆಗಳಿಗೆ ಬೆಂಬಲ ನೀಡಬೇಕು. ಸ್ಥಳೀಯ ಕಲಿಕೆ, ಮೌಲ್ಯಮಾಪನ ಮತ್ತು ಸಂಶೋಧನೆಗಳ ಫಲಶ್ರುತಿಯನ್ನು ಇತರೆಡೆ ಪಸರಿಸಬೇಕು. ಪಿಡುಗು ನಿಯಂತ್ರಣಕ್ಕೆ ನೆರವಾಗುವ ತಂತ್ರಜ್ಞಾನವು ಎಲ್ಲರಿಗೂ ದೊರೆಯುವಂತಿರಬೇಕು, ಉಚಿತವಾಗಿರಬೇಕು, 'ಸಿರಾಕುಸಾ ತತ್ವ'ಗಳನ್ನು ಒಳಗೊಂಡಂತೆ ಮಾನವ ಹಕ್ಕುಗಳನ್ನು ಗೌರವಿಸುವಂತಿರಬೇಕು, ಇತರ ಉದ್ದೇಶಗಳಿಗೆ ದುರ್ಬಳಕೆ ಮಾಡಿಕೊಳ್ಳದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

9. **ಎಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಸಮಗ್ರ ಬೆಂಬಲ:** ಗಂಡಾಂತರ ಹಾಗೂ ಅಸಹಾಯಕತೆ ತಂದೊಡ್ಡುವ ಸಾಮಾಜಿಕ – ಆರ್ಥಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ನಿರ್ಧಾರಗಳ ಕುರಿತು ಬಹು ವಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು ಮತ್ತು ಅವುಗಳ ಮೇಲೆ ನಿಗಾ ಇರಿಸಬೇಕು. ಪಿಡುಗು ನಿಯಂತ್ರಿಸುವ ಕ್ರಮಗಳ ಅಂಗವಾಗಿ ಜೀವನೋಪಾಯ ಮತ್ತು ಹಕ್ಕುಗಳಿಗೆ ಎರವಾದವರಿಗೆ ಸಮಗ್ರ ರೂಪದ ಸಾಮಾಜಿಕ ಮತ್ತು ಆರ್ಥಿಕ ಬೆಂಬಲ ನೀಡಬೇಕು. ಅವರಿಗೆ ಆಹಾರ, ನೀರು, ನೈರ್ಮಲ್ಯ, ವಸತಿ, ಜೀವನೋಪಾಯ, ಶಿಕ್ಷಣ, ಡಿಜಿಟಲ್ ಸೌಲಭ್ಯ ಮತ್ತು ರೋಗ ನಿರ್ಬಂಧಿಸುವ ಮತ್ತು ಆರೈಕೆ ಒಳಗೊಂಡ ಸಮಗ್ರ ಆರೋಗ್ಯ ಸೇವೆಗಳನ್ನು ಒದಗಿಸಬೇಕು. ಮಾನಸಿಕ ಆರೋಗ್ಯ, ಏಕಾಂಗಿತನ, ಲೈಂಗಿಕ ಹಿಂಸೆ ಮತ್ತು ಇತರ ಬಗೆಯ ದುರ್ಬಳಕೆ ಸಂದರ್ಭಗಳಲ್ಲಿ ಅಗತ್ಯವಾದ ಬೆಂಬಲ ನೀಡಬೇಕು.

10. **ಸಮಗ್ರ ಸ್ವರೂಪದ ಸಾರ್ವಜನಿಕ ಆರೋಗ್ಯಕ್ಕೆ ಹಣಕಾಸು ನೆರವಿನ ಖಾತರಿ:** ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗಿನ ಸಮಗ್ರ ಸ್ವರೂಪದ ಸಾರ್ವಜನಿಕ ಆರೋಗ್ಯ, ಆರೋಗ್ಯ ಆರೈಕೆ ಮತ್ತು ಸಾಮಾಜಿಕ ರಕ್ಷಣೆ ಮತ್ತು ಮೇಲೆ ಉಲ್ಲೇಖಿಸಿರುವ ತತ್ವಗಳು ಮತ್ತು ವಿಧಾನಗಳನ್ನು ಬೆಂಬಲಿಸುವ ವ್ಯವಸ್ಥೆ, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸುಸ್ಥಿರ ಮತ್ತು ಸಮಾನ ಸ್ವರೂಪದ ಹಣಕಾಸು ನೆರವಿನ ಹೆಚ್ಚಳವನ್ನು ಖಚಿತಪಡಿಸಿಕೊಳ್ಳಬೇಕು.

ಈ ತತ್ವಾದರ್ಶಗಳು ಮತ್ತು ವಿಧಾನಗಳು ಕಾನೂನು, ಮಾನದಂಡಗಳು, ವ್ಯವಸ್ಥೆಗಳು, ಕಾರ್ಯಕ್ರಮಗಳು ಮತ್ತು ಕೈಗೊಂಡ ಕ್ರಮಗಳಿಗೆ ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೆ ಮಾಹಿತಿ ನೀಡಬೇಕು. ಅಂತರರಾಷ್ಟ್ರೀಯ ಆರೋಗ್ಯ ನಿಯಂತ್ರಣ ಕ್ರಮಗಳು ಮತ್ತು 'ಸಿರಾಕುಸಾ ತತ್ವ'ಗಳ ಭವಿಷ್ಯದ ಯಾವುದೇ ಪರಿಷ್ಕರಣೆಯಲ್ಲಿ ಪ್ರತಿಫಲನಗೊಳ್ಳಬೇಕು. ನಮ್ಮ ಪಾತ್ರದ ಬಗ್ಗೆ ಹೇಳುವುದಾದರೆ, ಸಹಿ ಹಾಕಿರುವ ನಾವು, ಈ ತತ್ವಗಳು ವಾಸ್ತವದಲ್ಲಿ ಜಾರಿಗೆ ಆಗುವುದಕ್ಕೆ ಸಂಪೂರ್ಣವಾಗಿ ಬದ್ಧರಾಗಿದ್ದೇವೆ. ನಮ್ಮೊಂದಿಗೆ ಕೈಜೋಡಿಸಲು ಇತರರನ್ನೂ ಸಂಪರ್ಕಿಸುತ್ತೇವೆ ಮತ್ತು ಆಹ್ವಾನಿಸುತ್ತೇವೆ.

| ಹೆಸರು | ವೈಯಕ್ತಿಕ ಮತ್ತು / ಅಥವಾ ಸಂಘಟನೆ | ದೇಶ / ಪ್ರದೇಶ |
|---|---|---|